# ಬಾಳ್ವೆಯ ಪರಿ

ಕಳೆದ ಅರ್ಧಶತಮಾನದ ಹಿಂದಕ್ಕೆ ಹೋಗೋಣ. ಆಗ ಮಳೆಬೆಳೆ ಆಗುತ್ತಿತ್ತು. ಜನಜಾನುವಾರುಗಳ ಸಂಬಂಧ ಚೆನ್ನಾಗಿತ್ತು. ಕೆಲವೊಮ್ಮೆ ಪ್ರಕೃತಿಯಲ್ಲಿ ಅವಘಡಗಳು ಸಂಭವಿಸುತ್ತಿತ್ತು. ಆದರೆ, ಜನ ಬಡತನ ಸಿರಿತನಗಳ ಬಗೆಗೆ ಹೆಚ್ಚು ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಜನ ಬೆವರು ಸುರಿಸಿ ದುಡಿಯುತ್ತಿದ್ದರು. ಸಾಮೂಹಿಕ ಪ್ರಜ್ಞೆ ಇರುತ್ತಿತ್ತು. ಹೊಲ, ತೋಟ, ತುಡಿಕೆ, ಏರುತಗ್ಗುಗಳಲ್ಲಿ ಜನ ಕಾಣುತ್ತಿದ್ದರು. ಮಣ್ಣು ಅವರ ಹೃದಯಕ್ಕೂ ಮನಸ್ಸಿಗೂ ಕೇವಲ ಮಣ್ಣಾಗಿರಲಿಲ್ಲ. ಅದು 'ಭೂತಾಯಿ ಆಗಿತ್ತು. ಬೀಸುವ ಗಾಳಿ 'ಪ್ರಾಣದೇವರು ಎಂದೆನಿಸಿಕೊಂಡಿತ್ತು. ಬೆಂಕಿಯು ಅವರ ಪಾಲಿಗೆ 'ಅಗ್ನಿದೇವ ಆಗಿತ್ತು. ಜಲವು 'ವರುಣದೈವದ ಕೃಪೆಯಾಗಿತ್ತು. ಇದೆಲ್ಲವೂ ದೈವ ಕೊಟ್ಟ ಕಾಣಿಕೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂಬ 'ಅರಿವು ತಲತಲಾಂತರದಿಂದಲೂ ಅವರಲ್ಲಿ ನೆಲೆಯೂರಿತ್ತು. ಮನೆಯಲ್ಲಿದ್ದ ಗೃಹಿಣಿ ಹಾಗೂ ಮನೆಯ ಹೊರಗಡೆ ಇದ್ದ 'ಯಜಮಾನ ಸಮುದಾಯದ ಎಲ್ಲಾ ಹಿರೀಕರಲ್ಲಿ ಈ ಭಾವ ಸದಾ ನೆರೆಯುತ್ತಲೇ ಇತ್ತು!

ಆದರೆ, ನಾವು ಬರಬರುತ್ತಾ 'ಅಕ್ಷರ ಕಲಿತು ಹೆಚ್ಚು ವಿದ್ಯಾವಂತರಾದೆವು. ನಮ್ಮಲ್ಲಿ ನಾಗರಿಕತೆ ಬೆಳೆಯಿತು. ಸಣ್ಣಮನೆಗಳು ದೊಡ್ಡ ಮನೆಗಳಾದುವು. ಎಂಟುಹತ್ತು ಮನೆಗಳಿದ್ದ ಊರು ಸಣ್ಣ ಹಳ್ಳಿಯಾಯಿತು. ಸಣ್ಣ ಹಳ್ಳಿಯೊಂದು ದೊಡ್ಡ ಗ್ರಾಮವಾಗಿ ಬೆಳೆಯಿತು. ಅನಂತರ ಅದು ತಾಲ್ಲೂಕು ಆಗಿ ಕೊನೆಗೆ ಇಂಥ ಹತ್ತಾರು ತಾಲ್ಲೂಕುಗಳು ಜಿಲ್ಲೆಗಳಾದುವು. ಜನಸಂಖ್ಯೆ ಬೆಳೆದಂತೆ ಅದಕ್ಕೆ ತಕ್ಕಂತೆ ತಾಂತ್ರಿಕತೆ, ಉದ್ಯೋಗಸೃಷ್ಟಿ, ವಿದ್ಯಾಭ್ಯಾಸ, ಅಭಿವೃದ್ಧಿ ಇವೆಲ್ಲವೂ ಬೆಳೆದವು. ಇದು ಭಾರತ ಕಾಲಕ್ರಮೇಣ ಮೈತಾಳಿದ ಪರಿ. ಇದೇ ಪರಿಯು ವಿಶ್ವದ ಎಲ್ಲಾ ದೇಶಗಳಲ್ಲೂ ಆಯಿತು. ನಾವು ನಾಗರಿಕರಾದೆವು; ಆಧುನಿಕರಾದೆವು. ಇದೆಲ್ಲಾ ಸರಿ. ಆದರೆ, ನಮ್ಮ ಆರ್ಥಿಕಸಾಮಾಜಿಕ ಬೆಳವಣಿಗೆಗಾಗಿ ಪ್ರಕೃತಿಯೊಡನೆ ನಿರಂತರ ಹತ್ಯೆ ಮಾಡುತ್ತ ಬಂದೆವು. ನಾವು ನೆಲದ ಒಡಲನ್ನು ಬಗೆದೆವು. ಅಲ್ಲಿ ನೀರನ್ನು ಬರಿದಾಗಿಸಿದೆವು. ಕಾಡನ್ನು ಕಡಿದೆವು ಪ್ರಕೃತಿಯ ಸಮತೋಲನವನ್ನು ನಮ್ಮ ಆಸೆ ಬುರುಕುತನಕ್ಕಾಗಿ ಬರಡಾಗಿಸಿದೆವು. ಗುಡ್ಡಬೆಟ್ಟಗಳನ್ನು ಸಮಗೊಳಿಸಿ 'ವಿಹಾರ ತಾಣಗಳನ್ನಾಗಿ ಮಾಡಿಕೊಂಡೆವು. ನಾವು 'ಪ್ರಕೃತಿಪರಿಸರಕ್ಕೂ 'ಜೀವ ಇದೆಯೆಂಬುದನ್ನು ಮರೆತೆವು. ಜೀವಸಂಕುಲಗಳಿಗೂ ತಮ್ಮದೇ ಸಂಸಾರ ಇದೆಯೆಂಬುದನ್ನು ಮರೆತು ಹೋದೆವು. 'ವಿಶ್ವಕುಟುಂಬ ಎಂಬ ಪ್ರಜ್ಞೆ ನಮ್ಮ ದಿನದಿನದ ಬಾಳುವೆಯ ಕಲ್ಪದಲ್ಲಿ ಮರೆಯಾಯಿತು. ಆಧುನಿಕ ತಂತ್ರಜ್ಞಾನದ ಪ್ರವಾಹದಲ್ಲಿ ನಮ್ಮ ಸುತ್ತಲ 'ಪರಿಸರವನ್ನೇ ಮರೆತೆವು. ನಾವು ಹೆಚ್ಚು ಹೆಚ್ಚು ಆಧುನಿಕರಾದಷ್ಟು ಕೊಳ್ಳುಬಾಕತನ ವಿಕಾರವಾಗಿ ಬೆಳೆಯಿತು.

ಶ್ರೀಮನ್ಮಹಾಭಾರತದ 'ಅನುಶಾಸನಪರ್ವದಲ್ಲಿ ಭೀಷ್ಮರು ಸತ್ಕಾರ್ಯಗಳು ಸೌಭಾಗ್ಯವನ್ನು ತರುತ್ತವೆ. ದುಷ್ಕಾರ್ಯಗಳು ದೌರ್ಭಾಗ್ಯಗಳನ್ನು ತರುತ್ತವೆ. ಶ್ರಮದ ದುಡಿಮೆಯಿಂದ ಎಲ್ಲ ಬಗೆಯ ಭಾಗ್ಯವನ್ನೂ ಗಳಿಸಬಹುದು. ಆದರೆ, ಶ್ರಮಪಡದೆ ಮಾನವನು ಏನನ್ನೂ ಗಳಿಸಲಾರ. ಶ್ರಮದ ದುಡಿಮೆಯಿಲ್ಲದೆ, ಮಾನವನು ಮಿತ್ರರೂ ಸೇರಿದಂತೆ ಶ್ರೀಮಂತಿಕೆ, ಬದುಕಿನ ಸುಖ, ಸೊಗಸು, ಸೌಭಾಗ್ಯ ಯಾವುದನ್ನೂ ಪಡೆಯಲಾರ. ಎಂದು ಹೇಳಿದ್ದಾರೆ. ವ್ಯಾಸರ ಈ ಮಾತಿನ ಹಿಂದಿರುವ ಮರ್ಮವನ್ನು ನಾವು ತಿಳಿಯಬೇಕಾಗಿದೆ. ನಮ್ಮ ಬದುಕು ಮೂರು ಮೆಟ್ಟಿಲುಗಳನ್ನು ಆಶ್ರಯಿಸಿತ್ತು. ವ್ಯಾವಹಾರಿಕ, ಪ್ರಾತಿಭಾಸಿಕ ಮತ್ತು ಆಧ್ಯಾತ್ಮಿಕ ಇವುಗಳ ನಡುವೆ ಪರಸ್ಪರ ಸಂಬಂಧ ಮತ್ತು ಸಾತತ್ಯಗಳು ಇದ್ದವು. 'ವ್ಯಾವಹಾರಿಕ ಪ್ರಪಂಚವು ಕಾಲಕ್ರಮೇಣ ಪ್ರಾತಿಭಾಸಿಕ ಪ್ರಪಂಚವನ್ನು ಹೊಕ್ಕು; ಅಲ್ಲಿಂದ ಆಧ್ಯಾತ್ಮಿಕ ಪ್ರಪಂಚವು ನಮ್ಮನ್ನು ಆವರಿಸಿಕೊಂಡು ಜೀವನಕ್ಕೆ ಬೆಲೆಯನ್ನೂ ಮೌಲ್ಯವನ್ನೂ ತಂದು ಕೊಡುತ್ತಿತ್ತು. ಇವು ಮೂರು ಮನುಷ್ಯ ಸಂಬಂಧಗಳಿಗೆ ಆಳವಾದ ಬೆಸುಗೆಯನ್ನು ಹಾಕುತ್ತಿತ್ತು. ವ್ಯಾವಹಾರಿಕ ಪ್ರಪಂಚವು ಸ್ವಾರ್ಥವನ್ನು ಸಂಕೇತಿಸುತ್ತಿತ್ತು. ಆಗ ಆಧ್ಯಾತ್ಮಿಕವು ತಲೆಹಾಕಿ 'ಪರಾರ್ಥದ ಮೌಲ್ಯವನ್ನು ತೋರಿಸುತ್ತಿತ್ತು. ಅರ್ಥವು ಸ್ವಾರ್ಥವನ್ನು ಪ್ರತಿನಿಧಿಸುವಾಗ ಅಲ್ಲಿ 'ಪರಾರ್ಥ ಎಂಬ ದೈವವು ಆಧ್ಯಾತ್ಮಿಕ ಬಂಧುವಾಗಿ ನಮ್ಮ ಕೈಯನ್ನು ಹಿಡಿಯುತ್ತಿತ್ತು. ಇದು ಪರಮನೆಲೆ. ಆದ್ದರಿಂದ ಇದು ಪಾರಮಾರ್ಥಿಕ ಸ್ವರೂಪದಲ್ಲಿ ಅಮೂರ್ತವಾಗಿಯೇ ಉಳಿಯುತಿತ್ತು.

ಈಗ ತುಸು ಆಳವಾಗಿ ಚಿಂತಿಸೋಣ. ನಾವು ಕಳೆದ ನೂರು ವರ್ಷಗಳಲ್ಲಿ ಭೌತಿಕವಾಗಿ ತುಂಬಾ ಬೆಳೆದೆವೇನೋ ಸರಿ. ಇದು ಸಂಪತ್ತನ್ನೂ ಅಧಿಕಾರವನ್ನೂ ಅನುಕೂಲವನ್ನೂ ನಮಗೆ ತಂದೊದಗಿಸಿತು. ಆದರೆ, ಇನ್ನೊಂದೆಡೆ ನಮ್ಮ ಅನುಕೂಲಕ್ಕಾಗಿ ಪ್ರಕೃತಿಯನ್ನು ವಿಕೃತಿಗೊಳಿಸಿಕೊಂಡು ಬಿಟ್ಟೆವು. ಅದು ವಿಕಾರವಾಗಿ ಉದ್ಬುದ್ಧವಾಗಿ ಅಸ್ತವ್ಯಸ್ತಗೊಂಡಿತು. ಇದು ಅಪಸವ್ಯಗೊಂಡಾಗ ಮನುಷ್ಯನಿಗೆ ಅದು ವಿಷವಾಗಿ ಪರಿಣಮಿಸುತ್ತದೆ ಎಂಬುದಕ್ಕೆ 1918ರ ಸುಮಾರಿನಲ್ಲಿ ಕಾಣಿಸಿಕೊಂಡ ಇನ್‌ಫ್ಲ್ಯುಯೆಂಜಾ. ಕಾಲಕ್ರಮೇಣ ಬಂದ ಹತ್ತಾರು ಸಾಂಕ್ರಾಮಿಕ ರೋಗಗಳು ಇದಕ್ಕೆ ಸಾಕ್ಷಿ. ಈ ನಡುವೆ ಡೆಂಗ್ಯೂ, ಚಿಕನ್‌ಗುನ್ಯಾ, ಈಗ ಕೊರೊನ ಎಂಬ ಅಮೂರ್ತರಾಕ್ಷಸ. ವಿಶ್ವದ ಬೆನ್ನು ಏರಿ ನಿಂತಿದ್ದಾನೆ. ಅವನು ನಮ್ಮ ನಮ್ಮ ನಡುವೆ ನುಗ್ಗಲು ಯತ್ನಿಸುತ್ತಿದ್ದಾನೆ! ನಾವು ಹೊರಗಣ ಭೌತಿಕ ಸಂಪತ್ತನ್ನು ಉಳಿಸಿಕೊಳ್ಳುತ್ತಲೇ, ಸಂಸ್ಕೃತಿ ಸಂಪನ್ನರಾಗಬೇಕಾಗಿತ್ತು. ನಾವು ನಾಗರಿಕರಾಗುವುದರ ಜತೆಗೆ ಸಂಸ್ಕೃತಿ ಸಂಪನ್ನರೂ ಆಗಬೇಕಾಗಿತ್ತು. ವ್ಯಾವಹಾರಿಕ ಪ್ರಪಂಚವು ಆಧ್ಯಾತ್ಮಿಕ ತಿಳುವಳಿಕೆಯಲ್ಲಿ ಧ್ಯಾನಸ್ಥವಾಗಬೇಕಾಗಿತ್ತು. ಈ ಎಚ್ಚರಗಳು ಸಮತೆ, ಸಮನ್ವಯಗಳಾಗಿ ರೂಪುಗೊಳ್ಳಬೇಕಾಗಿತ್ತು. ಇರಲಿ ಪ್ರಕೃತಿಯು 'ವಿಕೃತಿ ಆಗದೆ ಸಮಲಂಕೃತಿಯಾಗಿ ನಮ್ಮ ನೆಲೆಯಲ್ಲಿ ನೆಲೆಸಿಕೊಳ್ಳೋಣ. ಚಾಣಕ್ಯನ ಮಾತು ಹೀಗಿದೆ:

'ಗತೇ ಶೋಕೋ ನ ಕರ್ತವ್ಯೋ, ಭವಿಷ್ಯಂ ನೈವ ಚಿಂತಯೇತ್| ವರ್ತಮಾನೇನ ಕಾಲೇನ ವರ್ತಯನ್ತಿ ವಿಚಕ್ಷಣಾಃ||

ಕಳೆದು ಹೋದುದರ ಬಗ್ಗೆ ಯೋಚಿಸಿ ಕಾಲವನ್ನು ಹಾಳುಮಾಡಬೇಡ. ಈಗ ಭವಿಷ್ಯದ ಬಗ್ಗೆ ಚಿಂತಿಸುವುದಕ್ಕಿಂತ ವರ್ತಮಾನದಲ್ಲಿ ಬದುಕಿ ಸಾಧಿಸೋಣ. ಇದು ನಾವು ಹಿಡಿಯಬೇಕಾದ ದಾರಿ!

■ ಪುರಂಜೀವಿ

## ಅಂಬೇಡ್ಕರ್ ನುಡಿ ಮುತ್ತುಗಳು

- ಒಂದು ಮಂದಿರ ಕಟ್ಟಿಸಿದರೆ ಸಾವಿರ ಭಿಕ್ಷುಕರು ಹುಟ್ಟಿಕೊಳ್ಳುತ್ತಾರೆ, ಒಂದು ಗ್ರಂಥಾಲಯ ಕಟ್ಟಿಸಿದರೆ ಲಕ್ಷಾಂತರ ವಿದ್ವಾಂಸರು ಹುಟ್ಟಿಕೊಳ್ಳುತ್ತಾರೆ.
- ಗುಲಾಮರು ತಮಗಾಗಿ ಬದುಕಿದರೆ ಸ್ವಾಭಿಮಾನಿಗಳು ಸಮಾಜಕ್ಕಾಗಿ ಬದುಕುತ್ತಾರೆ.
- ಎಂದು ಭಾರತದ ಪ್ರಜೆಗಳಿಗೆ ಮತದಾನದ ಮಹತ್ವ ತಿಳಿಯುತ್ತದೆಯೋ ಅಂದು ಭ್ರಷ್ಟ ರಾಜಕಾರಣಿಗಳು ಭಿಕಾರಿಗಳಾಗುತ್ತಾರೆ.
- ಮನುಷ್ಯ ಚಿರಂಜೀವಿ ಆಗಲಾರ ಆದರೆ ಅವನ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ.
- ತಾವು ಇರುವ ಕತ್ತಲೆಯನ್ನು ಅರಿಯದವರು ಬೆಳಕಿಗಾಗಿ ಎಂದೂ ಹುಡುಕುವುದಿಲ್ಲ, ಶಿಕ್ಷಣ ಈ ಪ್ರಜ್ಞೆಯನ್ನು ಜಾಗೃತಗೊಳಿಸುತ್ತದೆ.
- ಶಿಕ್ಷಣ ಎನ್ನುವುದು ಹುಲಿಯ ಹಾಲಿದ್ದಂತೇ, ಅದನ್ನು ಕುಡಿದವರು ಗರ್ಜಿಸಲೇಬೇಕು.
- ಯಾವ ಧರ್ಮದಲ್ಲಿ ಸಮಾನತೆ, ಪ್ರೀತಿ, ಬಂಧುತ್ವವಿಲ್ಲವೋ ಅಂಥ ಧರ್ಮವನ್ನು ಧರ್ಮವೆಂದು ಕರೆಯುವುದಕ್ಕೆ ಸಿದ್ಧವಿಲ್ಲ.
- ನಿಮ್ಮ ಮಕ್ಕಳಿಗೆ ಧಾರ್ಮಿಕತೆಯನ್ನು ಬೋಧಿಸಬೇಡಿ ಅವರು ಮೂಢನಂಬಿಕೆಯ ಗುಲಾಮರಾಗುತ್ತಾರೆ. ಅವರಿಗೆ ಶಿಕ್ಷಣ ಕೊಡಿ ಗುಲಾಮಗಿರಿಯನ್ನು ಮೆಟ್ಟಿನಿಲ್ಲುತ್ತಾರೆ.